**SC No. 386/2022**
**PW-10**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 386/2022**

| | | |
|---|---|---|
| ಸಾಕ್ಷಿದಾರರ ಹೆಸರು | ಎಂ.ಸಿ ರಾಜಶೇಖರ್ | ಪ್ರಮಾಣ ವಚನ ಮಾಡಿದ ದಿನಾಂಕ: 12.01.2026 |
| ತಂದೆಯ/ಗಂಡನ ಹೆಸರು | ಲೇಟ್ ಚೆನ್ನಮಟ್ಟಲಿಂಗು | |
| ವಯಸ್ಸು | 66 ವರ್ಷ | |
| ವೃತ್ತಿ | ನಿವೃತ್ತ ಸಿಪಿಐ | ಪ್ರಾ.ಸಾಃ 10 |
| ವಾಸ ಸ್ಥಳ | ಮೈಸೂರು | ಚಾ.ಸಾಃ 17 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ದಿನಾಂಕ *23.10.2019* ರಿಂದ *30.06.2020* ರವರೆಗೆ ನಂಜನಗೂಡು ವೃತ್ತದಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *06.11.2019* ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಬಗ್ಗೆ ಚಾಸಾ-*16* ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ ಪ್ರಕರಣದ ಸಾಕ್ಷಿದಾರರಾದ ಚಾಸಾ-*1* ರವರ ಮರು ಹೇಳಿಕೆ, ಚಾಸಾ-*6* ರಿಂದ *9* ಮತ್ತು *11* ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನು.

ದಿನಾಂಕ *06.01.2020* ರಂದು ಪ್ರಕರಣದ ತನಿಖೆಯನ್ನು ಮುಂದುವರಿಸಿ ಈ ಪ್ರಕರಣದ ಆರೋಪಿ ಸುನೀಲ್ ಕುಮಾರ್ ಎಂಬುವವರು ಮೈಸೂರು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದು ಜಾಮೀನು ಮಂಜೂರಾದ

ಪ್ರತಿಗಳನ್ನು ಹಾಜರುಪಡಿಸಿದ್ದರು ನಾನು ನ್ಯಾಯಾಲಯದ ಆದೇಶದಂತೆ ಪಂಚರಾದ ತಿಪ್ಪೇಶ ಮತ್ತು ತೇಜಸ್ವಿನಿ ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಕೆಎ-*41*-ಎಂಸಿ-*4591* ಬ್ರಿಜಾ ಕಾರ್ ಅನ್ನು ಆರ್.ಸಿ ಮಾಲೀಕರಾದ ಸುನೀಲ್ ಕುಮಾರ್ ರವರಿಗೆ ಬಿಡುಗಡೆ ಮಾಡಿದ್ದೆನು.

ದಿನಾಂಕ *20.01.2020* ರಂದು ತನಿಖೆಯನ್ನು ಮುಂದುವರಿಸಿ ಚಾಸಾ-*10* ರವರಿಂದ ಪ್ರಕರಣಕ್ಕೆ ಸಂಬಂಧಿಸಿದ ಕೆಎ-*41*-ಎಂಸಿ-*4591* ಬ್ರಿಜಾ ಕಾರ್ ಐ.ಎಂ.ವಿ ಪರೀಶೀಲನಾ ವರದಿಯನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು ಐ.ಎಂ.ವಿ ಪರೀಶೀಲನಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*5* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ. *5(ಬಿ)* ಎಂದು ಗುರುತಿಸಲಾಯಿತು.

ದಿನಾಂಕ *20.02.2020* ರಂದು ತನಿಖೆಯನ್ನು ಮುಂದುವರಿಸಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಂಜನಗೂಡು ಸಂಚಾರಿ ಠಾಣೆಯ ದಿನಾಂಕ *01.11.2019* ರ ಠಾಣಾ ದಿನಚರಿಯನ್ನು ಚಾಾ-*15* ರವರಿಂದ ಪಡೆದುಕೊಂಡಿದ್ದೆನು. ಸಾಕ್ಷಿದಾರರು ಠಾಣಾ ದಿನಚರಿ ಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*10* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ. *10 (ಎ)* ಎಂದು ಗುರುತಿಸಲಾಯಿತು.

ದಿನಾಂಕ *28.02.2020* ರಂದು ತನಿಖೆಯನ್ನು ಮುಂದುವರಿಸಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಂಜನಗೂಡು ಪಟ್ಟಣ ಠಾಣೆ ದಿನಾಂಕ *02.11.2019* ರ ಠಾಣಾ ದಿನಚರಿಯನ್ನು ಠಾಣಾಧಿಕಾರಿಯವರಿಂದ ಪಡೆದುಕೊಂಡಿದ್ದೆನು. ಸಾಕ್ಷಿದಾರರು ದಿನಾಂಕ *02.11.2019* ರ ಠಾಣಾ ದಿನಚರಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *12* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.*12(ಎ)* ಎಂದು

ಗುರುತಿಸಲಾಯಿತು.

ನಂತರ ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ಮೇಲೆ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನು.

ಫ್ರಾಸಾ–*1* ರವರು ನಿಪಿ–*1* ರಂತೆ ನನ್ನ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎಸ್.ಎನ್. ವಕೀಲರಿಂದ :**

ನಾನು ಪಿರ್ಯಾದುದಾರರ ದೂರಿನಲ್ಲಿ ಹೇಳಿದಂತೆ ಒಂದು ದಿವಸ ದೂರನ್ನು ಸಲ್ಲಿಸಲು ತಡ ಆಗಿರುವ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿಯಂತೆ ದೂರನ್ನು ಸಲ್ಲಿಸಿದ್ದರ ಬಗ್ಗೆ ನಾನು ಯಾವ ಮೇಲಾಧಿಕಾರಿಗಳಿಗೆ ತಿಳಿಸಿ ಅನುಮತಿ ಪಡೆದುಕೊಂಡಿದ್ದರು ಎಂದು ನಾನು ಅವರನ್ನು ವಿಚಾರಣೆ ಮಾಡಿರುವುದಿಲ್ಲ. ಚಾಸಾ–8 ಮತ್ತು 9 ರವರು ಸಿಬ್ಬಂದಿಯವರು ಇದ್ದು ಅವರುಗಳು ವಾಹನವನ್ನು ನಿಲ್ಲಿಸಿ ಪಿರ್ಯಾದುದಾರರ ಕಡೆ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ಕಾರಿನಲ್ಲಿ ಇದ್ದರು ಎಂದು ಹೇಳುವ ವ್ಯಕ್ತಿಗಳನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ಆರೋಪಿತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತನನ್ನಾಗಲೀ ಅಥವಾ ಆತನ ಕುಟುಂಬದವರನ್ನಾಗಲೀ ವಿಚಾರಣೆ ಮಾಡದೇ ಪಿರ್ಯಾದುದಾರರು ಪೊಲೀಸ್ ಇಲಾಖೆಯವರು ಇದ್ದುದರಿಂದ ಮಾಡಿಕೊಂಡಿರುವ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ವರದಿಯನ್ನು ತಯಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರ ಮರು ಹೇಳಿಕೆಯನ್ನು ಪಡೆದುಕೊಂಡಾಗ ಪಿರ್ಯಾದುದಾರರು

ಆರೋಪಿತನಿಗೆ 500/– ರೂ ದಂಡ ವಿಧಿಸಿರುವ ಬಗ್ಗೆ ನನ್ನ ಮುಂದೆ ಯಾವುದೇ ರಶೀದಿ ಹಾಜರುಪಡಿಸಿರಲಿಲ್ಲ. ಆರೋಪಿತನಿಗೆ 500/– ರೂ ದಂಡ ವಿಧಿಸಿದ್ದರು ಎನ್ನುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಠಾಣೆಯಿಂದ ಯಾವುದೇ ಸಿಬ್ಬಂದಿಯವರನ್ನು ಪಿರ್ಯಾದುದಾರರ ಕಡೆ ಕಳುಹಿಸಿರಲಿಲ್ಲ ನಂಜನಗೂಡು ಟೌನ್ ಪೊಲೀಸ್ ಠಾಣೆಯಿಂದ ಕಳುಹಿಸಿರಬಹುದು. ನಾನು ಆ ಇಬ್ಬರು ಪೇದೆಗಳನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಪಡೆದುಕೊಂಡಿರುವ ಸ್ಟೇಶನ್ ಡೈರಿಯಲ್ಲಿ ಇಬ್ಬರು ಪೇದೆಗಳು ಆ ದಿನ ಹೋಗಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ, ಪಿರ್ಯಾದುದಾರರು ದೂರಲ್ಲಾಗಲೀ ಅಥವಾ ಮರು ಹೇಳಿಕೆಯಲ್ಲಾಗಲೀ ಇಬ್ಬರು ಪೇದೆಗಳ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ನಾನು ಪಿರ್ಯಾದುದಾರರಿಗೆ ದೂರಿನಲ್ಲಿ ಹೇಳಿದ ಪ್ರಕಾರ ಆರೋಪಿತರು ಸೀಟ್ ಬೆಲ್ಟ್ ಧರಿಸದೇ ಅಜಾಗರೂಕತೆಯಿಂದ ಕಾರನ್ನು ಚಾಲನೆ ಮಾಡಿದ್ದರು ಎಂದು ಹೇಳಿದ್ದು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರ ಬಗ್ಗೆ ಏಕೆ ದಂಡ ವಿಧಿಸಿರಲಿಲ್ಲ ಎಂದು ಪಿರ್ಯಾದುದಾರರನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ನಂಜನಗೂಡು ಸಂಚಾರಿ ಠಾಣೆಯವರಿಂದ ಪಡೆದುಕೊಂಡಿರುವ ಸ್ಟೇಶನ್ ಡೈರಿಯಲ್ಲಿ ಆರೋಪಿತನು ಪಿರ್ಯಾದುದಾರರ ಮೇಲೆ ಕಾರನ್ನು ಹತ್ತಿಸಲು ಪ್ರಯತ್ನ ಪಟ್ಟಿದ್ದ, ರಶೀದಿ ಪುಸ್ತಕವನ್ನು ಕಿತ್ತುಕೊಳ್ಳಲು ಪ್ರಯತ್ನಪಟ್ಟಿದ್ದರ ಬಗ್ಗೆ ಹಾಗೂ ಪಿರ್ಯಾದುದಾರರಿಗೆ ಬಿಕ್ಷುಕಿ, ರಾಕ್ಷಸಿ ಅಂತ ಬೈದು ಜೀವ ಬೆದರಿಕೆ ಹಾಕಿದ್ದರ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ಈ ಬಗ್ಗೆ ಆರೋಪಿತನು ಹೇಳಿದ್ದರೆ ಆ ಬಗ್ಗೆ ಸಂಚಾರಿ ಪೊಲೀಸ್ ಠಾಣೆಯ ದಿನಚರಿಯಲ್ಲಿ

ಏಕೆ ಉಲ್ಲೇಖಿಸಿರುವುದಿಲ್ಲ ಎಂದು ನಾನು ಕೇಳಿರಲಿಲ್ಲ.

ಪಿರ್ಯಾದುದಾರರು ತಮ್ಮ ಪಿರ್ಯಾದಿಯಲ್ಲಿ ಯಾರೋ ಒಬ್ಬರು ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದರು ಅದನ್ನು ಯೂಟ್ಯೂಬ್ ನಲ್ಲಿ ಬಿಟ್ಟಿದ್ದರು ಎನ್ನುವ ಬಗ್ಗೆ ಆ ಮೊಬೈಲ್ ನಲ್ಲಿ ಸೆರೆಹಿಡಿದಿದ್ದವರನ್ನು ವಿಚಾರಣೆ ಮಾಡಿರುವುದಿಲ್ಲ. ಯೂಟ್ಯೂಬ್ ನಲ್ಲಿ ಪಿರ್ಯಾದುದಾರರು ದುರ್ನಡತೆ ಬಗ್ಗೆ ಪ್ರಸಾರ ಆಗುತ್ತಿದ್ದು ಅದನ್ನು ಡಿಲೀಟ್ ಮಾಡಿಸುವ ಸಲುವಾಗಿ ಆರೋಪಿ ವಿರುದ್ಧವಾಗಿ ಸುಳ್ಳು ದೂರು ದಾಖಲು ಮಾಡಿತ್ತು ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಪಿರ್ಯಾದುದಾರರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರು ಇದ್ದು ಅವರು ನೀಡಿರುವ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**